1	2	3	4	5
				61. ಕುಣಿಗಲ್ 62. ಸಂತೇ ಮಾವತ್ತೂರು 63. ಕೆಂಪನ ಹಳ್ಳಿ 64. ಹುಲಿಯೂರುದುರ್ಗ 65. ಚೌಡನ ಕುಪ್ಪೆ
27	ಉತ್ತರ ಕನ್ನಡ		66. ಶಿರಸಿ	

(*ವಹಿವಾಟು ನಡೆಯುತ್ತಿಲ್ಲ)

ಉಡುಪಿ, ಕೊಪ್ಪಳ ಮತ್ತು ಯಾದಗೀರ್ ಜಿಲ್ಲೆಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳು ಇರುವುದಿಲ್ಲ.

ಕೆ.ಐ.ಎ.ಡಿ.ಬಿ. ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಿರುವುದು

78(357) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಎಷ್ಟು ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಲಾಗಿದೆ;

ಆ) ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡುವಾಗ ಬಡಾವಣೆಯ ಅವಶ್ಯಕತೆಗೆ ಬೇಕಾಗುವ ಬಸ್ ಸೌಲಭ್ಯ ಹಾಗೂ ಸಾರ್ವಜನಿಕ ಸೌಲಭ್ಯಗಳು ಕಲ್ಪಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಸದರಿ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಸ್ಥಳಗಳು ಮತ್ತು ವಿಸ್ತೀರ್ಣ ಎಷ್ಟು (ವಿವರ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಯಾವುದೇ ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಿರುವುದಿಲ್ಲ. ಹಾಗೂ ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಬೃಹತ್ ಅಣೆಕಟ್ಟುಗಳ ನೀರಾವರಿ ಕ್ಷೇತ್ರಗಳು ಮತ್ತು ನೀರಾವರಿ ಯೋಜನೆಗಳು

81(154) ಶ್ರೀ ಪಾಟೀಲ್ (ನಡಹಳ್ಳಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ಹಾಗೂ ಮಧ್ಯಮ ಅಣೆಕಟ್ಟುಗಳ ಸಂಖ್ಯೆ ಎಷ್ಟು; ಅವು ಯಾವುವು ಮತ್ತು ಎಲ್ಲಿವೆ. ಅವುಗಳ ಹೆಸರಿನೊಂದಿಗೆ ಎಷ್ಟು ಪ್ರಮಾಣದಲ್ಲಿ ನೀರು ಸಂಗ್ರಹವಾಗುತ್ತವೆ; (ವಿವರ ಒದಗಿಸುವುದು)

ಆ) ರಾಜ್ಯದಲ್ಲಿರುವ ಬೃಹತ್ ಮತ್ತು ಮಧ್ಯಮ ಅಣೆಕಟ್ಟುಗಳನ್ನು ಎಂದು ನಿರ್ಮಿಸಲಾಗಿದೆ. ತಜ್ಞರು ಸದರಿ ಅಣೆಕಟ್ಟುಗಳ ಎಷ್ಟು ವರ್ಷಗಳ ಬಾಳಿಕೆ ಬಗ್ಗೆ ಅಂದಾಜಿಸಿದ್ದಾರೆ (ಅಣೆಕಟ್ಟುಗಳ ಹೆಸರು, ನಿರ್ಮಾಣ, ದಿನಾಂಕ ಮತ್ತು ಅದರ ಆಯುಷ್ಯದೊಂದಿಗೆ ವಿವರ ನೀಡುವುದು);

ಇ) ರಾಜ್ಯದಲ್ಲಿರುವ ಪ್ರತಿ ಅಣೆಕಟ್ಟಿಗೆ ನಿಗದಿಯಾಗಿರುವ ನೀರಾವರಿಗೆ ಒಳಪಡುವ ಕ್ಷೇತ್ರವೆಷ್ಟು; (ಅಣೆಕಟ್ಟುವಾರು ವಿವರ ನೀಡುವುದು);

ಈ) ಆಯಾ ಅಣೆಕಟ್ಟಿನಲ್ಲಿ ನಿಗದಿಯಾಗಿರುವ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆಯೇ; ಹಾಗಿದ್ದಲ್ಲಿ, ಎಷ್ಟು ನೀರಾವರಿ ಯೋಜನೆಗಳು ಬಾಕಿ ಇವೆ; (ಅಣೆಕಟ್ಟುವಾರು ವಿವರ ನೀಡುವುದು)

ಉ) ಬಾಕಿ ಉಳಿದ ನೀರಾವರಿ ಯೋಜನೆಗಳು ಪೂರ್ಣಗೊಳಿಸಬೇಕಾದಲ್ಲಿ ನಿಗದಿಪಡಿಸಿದ ಕಾಲಾವಧಿ ಎಷ್ಟು ಮತ್ತು ಅದಕ್ಕೆ ಖರ್ಚಾಗುವ ಹಣವೆಷ್ಟು ಕಾಮಗಾರಿಗಳು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಅಣೆಕಟ್ಟುವಾರು ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ರಾಜ್ಯದಲ್ಲಿ ಪೂರ್ಣಗೊಂಡಿರುವ ಬೃಹತ್ ಹಾಗೂ ಮಧ್ಯಮ ಅಣೆಕಟ್ಟುಗಳ ಸಂಖ್ಯೆ ಅನುಕ್ರಮವಾಗಿ 52 ಮತ್ತು 19 ಇರುತ್ತದೆ. ಅವುಗಳ ಸ್ಥಳ, ಹೆಸರು, ನೀರು ಸಂಗ್ರಹಣಾ ಸಾಮರ್ಥ್ಯದ ವಿವರಗಳನ್ನು ಅನುಬಂಧ–(1) ಮತ್ತು (2)ರಲ್ಲಿ ಒದಗಿಸಲಾಗಿದೆ.